# CRITERION-III

## 3.2.1. Article published in the Journals

# 2019-20

2019-20

(1)

ISSN: 2454-5813
Impact Factor: RJIF 3.6
Volume 5 Issue 3 2019
Months: Jul - Sep
Printed Journal
Indexed Journal
Refereed Journal
Peer Reviewed Journal

# International Journal of Kannada Research



Tirupati Journals Solutions
New Delhi, India

ar: 2019, Volume: 5, Issue: 3
SN: 2454-5813
mpact Factor: **Impact Factor: RJIF 3.6**
Online Available at **www.kannadajournal.com**

# International Journal of Kannada Research

**Index for 2019 (Vol - 5, Issue - 3) Part - B**

01. **ದೈವ ಭಕ್ತಿ ಆಚರಣೆ ಮತ್ತು ('ಪ್ರಾರ್ಥನೆ') ಹರಕೆ (ಕರ್ನಾಟಕ ಪ್ರದೇಶದ ಹಬ್ಬ, ಜಾತ್ರೆಗಳನ್ನು ಅನುಲಕ್ಷೀಸಿ)**
**Authored by:** ಡಾ.ಸಂಜೀವ ಆರ್.ನಾಯಕ
**oage:** 80-85

02. **ಬಸವಣ್ಣನವರ ವಚನಗಳಲ್ಲಿ ಸಮಾನತೆ**
**Authored by:** ಬಿ. ಬಿ. ಹೊಳಗುಂದಿ, ಡಾ. ಜಿ. ಆರ್. ಅಂಗಡಿ
**Page:** 86-89

03. **ವಚನ ಹಾಗೂ ತತ್ವಪದ ಸಾಹಿತ್ಯದಲ್ಲಿ ಲೋಕ ಕಲ್ಯಾಣ**
**Authored by:** ರಾಮರೆಡ್ಡಿ. ಕೆ.
**Page:** 90-92

04. **'ನಾಯಕ' ಹೆಸರಿಗೆ ಬೇಡರೆ ಸೂಕ್ತ**
**Authored by:** ಮಂಜಪ್ಪ
**Page:** 93-95

05. **ನಾ. ಕಸ್ತೂರಿಯವರ ":ಗಾಳಿಗೋಪುರ" ಕಾದಂಬರಿಯಲ್ಲಿ ಹಾಸ್ಯ**
**Authored by:** ಹೇಮಂತ್ ಕುಮಾರ್ ಎಸ್
**Page:** 96-99

06. **ಬಾಗಲಕೋಟ ಜಿಲ್ಲೆಯ ಜಾನಪದ ವೃತ್ತಿಪರ ಗಾಯಕರು - ಗೊಂದಲಿಗರು**
**Authored by:** ಡಾ. (ಶ್ರೀಮತಿ) ನಂದಾ ಎಮ್. ಪಾಟೀಲ
**Page:** 100-103

07. **ಕನ್ನಡ ಭಾಷೆ ಮತ್ತು ಜನಪದ**
**Authored by:** ಡಾ. ಎಸ್. ಬಿ. ರಾಠೋಡ
**Page:** 104-106

08. **The bahamani kingdom, the political history of two major rulers**
**Authored by:** Rathan N Salian
**Page:** 107-108

09. **ಪುತ್ತೂರಿನ ಐತಿಹಾಸಿಕ ಸ್ಥಳಗಳು**
**Authored by:** ವಿ. ಬಿ. ಅರ್ತಿಕಜೆ
**Page:** 109-111

10. **ಪ್ರಾಥಮಿಕ ಶಾಲಾ ಶಿಕ್ಷಕರ ಪಾತ್ರ ಗ್ರಹಿಕೆಗಳು ವಿಚಾರಗಳು ಹಾಗೂ ತುಲನೆ**
**Authored by:** ಡಾ. ಷಣ್ಮುಖ
**Page:** 112-115

International Journal of Kannada Research

# International Journal of Kannada Research

www.kannadajournal.com

Peer Reviewed Journal, Refereed Journal, Indexed Journal

ISSN: 2454-5813, Impact Factor: RJIF 4.89


## *Publication Certificate*

This certificate confirms that **"ರಾಮರೆಡ್ಡಿ. ಕೆ."** has published manuscript titled **"ವಚನ ಹಾಗೂ ತತ್ವಪದ ಸಾಹಿತ್ಯದಲ್ಲಿ ಲೋಕ ಕಲ್ಯಾಣ"**.

Details of Published Article as follow:

| | | |
|---|---|---|
| Volume | : | **5** |
| Issue | : | **3** |
| Year | : | **2019** |
| Page Number | : | **90-92** |

Certificate No.: **5-3-16**
Date: **01-07-2019**

Yours Sincerely,

Akhil Gupta

AkiNik Director Publications


Akhil Gupta
Publisher
International Journal of Kannada Research
www.kannadajournal.com
Tel: +91-9711224068

International Journal of Kannada Research
www.kannadajournal.com

ISSN: 2454-5813
IJKR 2019; 5(3): 90-92
© 2019 IJKR
www.kannadajournal.com
Received: 05-05-2019
Accepted: 09-06-2019

ರಾಮರೆಡ್ಡಿ. ಕೆ.
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ ಕೆ.ಎಲ್.ಇ.ಸಂಸ್ಥೆಯ. ಎಸ್.ವಿ.ಎಸ್.ಬೆಳ್ಳುಬ್ಬಿ ಮಹಾವಿದ್ಯಾಲಯ.

Correspondence
ರಾಮರೆಡ್ಡಿ. ಕೆ.
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ ಕೆ.ಎಲ್.ಇ.ಸಂಸ್ಥೆಯ. ಎಸ್.ವಿ.ಎಸ್.ಬೆಳ್ಳುಬ್ಬಿ ಮಹಾವಿದ್ಯಾಲಯ.

# ವಚನ ಹಾಗೂ ತತ್ವಪದ ಸಾಹಿತ್ಯದಲ್ಲಿ ಲೋಕ ಕಲ್ಯಾಣ

ರಾಮರೆಡ್ಡಿ. ಕೆ.

ಕಾಡಿನ ಮಾನವ ನಾಡಿನ ಮಾನವನಾದ ಮೇಲೆ ಕೂಡ ಮಾನವನ ಆಲೋಚನಾ ಕ್ರಮದಲ್ಲಿ ಇಂದಿಗೂ ಬಹುತೇಕ ಸುಧಾರಣೆ ಕಾಣಲು ಸಾಧ್ಯವಾಗಿಲ್ಲ. ಮಾನವ ಪ್ರಾಣಿಗಳಿಗಿಂತ ಭಿನ್ನವೆನಿಸಿದರೂ ಸ್ವಭಾವತಃ ದುಷ್ಟ, ಕೆಲವರು ಪ್ರಾಣಿ ಸಹಜವಾದ ನಡವಳಿಕೆಯನ್ನೇ ಇನ್ನೂ ಹೊಂದಿದ್ದಾರೆ. ಸುಖ-ದುಃಖ, ಹಸಿವು-ತೃಷೆ, ಕಾಮ-ಪ್ರೇಮ, ಈ ಎಲ್ಲ ವಿಚಾರಗಳಲ್ಲೂ ಪಶುವಿನಂತೆ. ಕೆಲವರಲ್ಲಿ ವಿವೇಕ ಕಡಿಮೆ, ಇಂದಿಗೂ ಕೆಲವರಲ್ಲಿ ಇದನ್ನು ಕಾಣುತ್ತೇವೆ.

ವಚನ ಮತ್ತು ತತ್ವಪದ ಪರಂಪರೆಯು 'ತತ್ವ ಮತ್ತು ಆಚರಣೆ ಎರಡೂ ಏಕೀಭವಿಸಿರುವ ಜೀವನ ವಿಧಾನ. ಈ ಪರಂಪರೆಯು ಸಾಮರಸ್ಯದ ಬದುಕೊಂದನ್ನು ಸಮೂಹಕ್ಕೆ ನೀಡುವ ಪ್ರಯತ್ನ ಮಾಡುತ್ತ ಬಂದಿದೆ.' ಇವೆರಡರಲ್ಲಿ ಸಮಾನವಾದ ಅಂಶವೇನೆಂದರೆ ನಡೆ ಮತ್ತು ನುಡಿ ಒಂದಾಗಿರುವಂತಹುದು. 'ಇಲ್ಲಿ ಮೊದಲು ನಡೆ ಆಮೇಲೆ ನುಡಿ. ಯಾವುದೇರೀತಿಯ ಜಾತಿ ಸೂತಕಗಳಿಲ್ಲದ, ಲಿಂಗ ತಾರತಮ್ಯವಿಲ್ಲದ ಪ್ರಜಾಸತ್ತಾತ್ಮಕ ಆಶಯಗಳನ್ನು ಅನ್ವಯಿಸಿಕೊಂಡು ಸಮೂಹದಲ್ಲಿ ಕ್ರಿಯಾಶೀಲವಾಗಿರುವ ತತ್ವಪದಗಳು ಕನ್ನಡ ನಾಡಿನ ಅಸ್ಮಿತೆಯ ಭಾಗವಾಗಿವೆ. ಅವು ನೆಲದ ತತ್ವ ಚಿಂತನೆಯನ್ನು ನಿಸರ್ಗ ವಿವೇಕದ ಜೊತೆ ಬೆರೆಸುತ್ತ ಸಮೂಹದ ಚಿಂತನಾ ಕ್ರಮವನ್ನು ಆರೋಗ್ಯವಾಗಿರುವಂತೆ ನೋಡಿಕೊಳ್ಳುತ್ತಿದೆ’ ಈ ಮಾತು ವಚನ ಸಾಹಿತ್ಯಕ್ಕೂ ಅನ್ವಯಿಸುತ್ತದೆ.

ಸಾವಿರಾರು ವರ್ಷಗಳ ಪರಂಪರೆಯನ್ನು ಹೊಂದಿರುವ ಭಾರತ ದೇಶದಲ್ಲಿ ಶರಣರು, ಅನುಭಾವಿಗಳು, ದಾರ್ಶನಿಕರು, ಸಾಧು ಸಂತರು ಮುಂತಾದವರು ಬಾಳಿ ಹೋಗಿದ್ದಾರೆ. ಇವರು ಜನ ಸಾಮಾನ್ಯರಿಗೆ ನೈತಿಕತೆಯ, ಆದರ್ಶದ ಅರಿವನ್ನು ಸರಳ ಭಾಷೆಯಲ್ಲಿ ತಿಳಿಸುತ್ತಾ ಲೋಕ ಕಲ್ಯಾಣಕ್ಕೆ ಭಾಷ್ಯ ಬರೆದವರು. ರಾಜಾಶ್ರಯ ಪಡೆದುಕೊಂಡಿದ್ದ, ಕ್ಲಿಷ್ಟವಾಗಿದ್ದ ಪಂಡಿತ ಸಾಹಿತ್ಯವು ಜನ ಸಾಮಾನ್ಯರಿಗೆ ನಿಲುಕದ ನಕ್ಷತ್ರಗಳಾಗಿದ್ದವು. ಅವುಗಳು ಪಂಡಿತೋತ್ತಮರ ವಾಗ್ವಾದಗಳಿಗೆ ಸೀಮಿತವಾಗಿದ್ದವು.

ಇಂತಹ ಸನ್ನಿವೇಶದಲ್ಲಿ ವಚನ ಮತ್ತು ತತ್ವಪದಗಳು ಲೋಕದ ಸತ್ಯಾಸತ್ಯತೆಗಳನ್ನು ಒರೆಗೆ ಹಚ್ಚಿ ಸರಳವಾದ ಜನ ಭಾಷೆಯಲ್ಲಿ ತಲುಪಿಸುವ ಕೆಲಸ ಮಾಡಿದವು. ಸಮಾಜದಲ್ಲಿ ಬೇರೂರಿದ್ದ ಜಾತಿ, ಲಿಂಗ, ವರ್ಗ, ವರ್ಣ, ಕಾಯಕ, ಮುಂತಾದ ಅಸಮಾನತೆಗಳನ್ನು ತೊಡೆದುಹಾಕಲು ವಚನ ಮತ್ತು ತತ್ವಪದಗಳು ಪ್ರಯತ್ನಿಸಿದವು. ಅವುಗಳಲ್ಲಿನ ಸರ್ವ ಸಮಾನತೆಯ ಆಶಯಗಳು ಇಂದಿಗೂ ನಮಗೆ ದಿಕ್ಸೂಚಿಯಾಗಿವೆ.

ಈ ಎರಡು ಪರಂಪರೆಗಳಿಗೆ ಲೋಕಕಲ್ಯಾಣವೇ ಪರಮ ಗುರಿಯಾಗಿತ್ತು. ಕಾಯಕ, ಸತಿ-ಪತಿ, ಜಾತಿ, ಲಿಂಗ ತಾರತಮ್ಯ, ಧಾರ್ಮಿಕ, ಆಹಾರ ಸಂಸ್ಕೃತಿ, ಸಾಮಾಜಿಕ, ರಾಜಕೀಯದಂತಹ ವಿಚಾರಗಳಲ್ಲಿ ಸಮಾನತೆಯನ್ನು ಬಿತ್ತಿದವು. ಸಮಾಜದಲ್ಲಿ ಬೇರೂರಿದ್ದ ಅಸಮಾನತೆಯನ್ನು ತಮ್ಮ ರಚನೆಗಳಲ್ಲಿ ಮುಕ್ತವಾಗಿ ಖಂಡಿಸುವ ಮೂಲಕ ವೈಚಾರಿಕ ಪ್ರಜ್ಞೆಯನ್ನು ಬೆಳೆಸಿದವು.

ಉದರ ಸನ್ಯಾಸವಿದು। ನಮ್ಮ ಉರಗ ಭೂಷಣನೊಳು। ಲೇಶವೂ ಮನವಿರಿಸದ ಉದರ ಸನ್ಯಾಸವಿದು॥ ಆಸೆಯ ತೊರೆದೇವೆಂದು ಘೋಷವ ಬಿಟ್ಟು ತಿರುಗಿ। ಮೋಸ ಗೊಳಿಸಲು ಪರರ। ಯತಿಯಾದೆವೆಂದು ವೇಶ್ಯೆ ಕಾಂತೆಯರಂತೆ। ವಶ ಮಾಡಿಕೊಂಡು ಜನರ ಕಾಸು ಗಳಿಸುವ ಹೇಸಿ ಮನುಜರ॥ ಕಪಟತನದೊಳು ವಂಚಿಸಿ ಜನರನ್ನು ಜಪಮಾಲೆಯಾ ಪಿಡಿದು ಯೋಗಿಯಂತೆ ಉಪಜೀವನವ ನಡೆಸುವ ಸಾಧನವಾಗಿ ತಪವ ಮಾಡುವರು ಜನರು ನೋಡುವಂತೆ॥’ ಎಂದು ರಾಯಚೂರಿನ ಮಹಿಳಾ ತತ್ವಪದಕಾರ್ತಿ ಕವಿ ಹನುಮಂತವ್ವ ನುಡಿಯುತ್ತಾಳೆ. ಸಮಾಜದಲ್ಲಿ ಕೆಲವರು ವಂಚನೆಯೇ ತಮ್ಮ ಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಉದರ ಪೋಷಣೆಗಾಗಿ ನಾನಾ

# CERTIFICATE OF PUBLICATION

(e)-ISSN No: 2456-6713 Impact Factor: 4.334

*Is hereby awarding this certificate to*

*Prof./Dr. /Mr./Mrs./Miss.* **RAMAREDDY. K.**

**International Educational Applied Research Journal**

*In recognition of the publication of the paper entitled*

*Title* " **GABBURINA VACHANAKARA BIBBI BAACHARASA**
ಗಬ್ಬೂರಿನ ವಚನಕಾರ ಬಿಬ್ಬಿ ಬಾಚರಸ "

*Published in International Educational Applied Research Journal*

*Volume.* **03**, *Issue.* **12**, **December 2019**

*Editor in Chief*

INTERNATIONAL EDUCATIONAL APPLIED RESEARCH JOURNAL (IEARJ)
Volume 03, Issue 12, Dec 2019
E-ISSN: 2456-6713

# GABBURINA VACHANAKARA BIBBI BAACHARASA

# ಗಬ್ಬೂರಿನ ವಚನಕಾರ ಬಿಬ್ಬಿ ಬಾಚರಸ

**Ramareddy. K.**

*Head, Department of Kannada, K.L.E.Society's S.V.S.Bellubbi Arts and Commerce College, Savadatti-591126. Dist. Belagavi.*

ಈ ಮೇಲಿನ ಸಾಲು ಗಬ್ಬೂರಿನ ಬಿಬ್ಬಿ ಬಾಚರಸರ ವಚನದ ಸಾಲು. ಬಿಬ್ಬಿ ಬಾಚರಸರು ಬಾಳಿದ್ದು ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಗಬ್ಬೂರಿನಲ್ಲಿ. ಕಲ್ಯಾಣ ಚಾಲುಕ್ಯರ ಕಾಲಕ್ಕೆ ಗಬ್ಬೂರು ಮಹತ್ವದ ಅಗ್ರಹಾರವಾಗಿತ್ತು. ಇದರ ಹೆಸರನ್ನು 'ಗೋಪುರ ಗ್ರಾಮ'ವೆಂದು ಒಂದು ಶಾಸನದಲ್ಲಿ ಉಲ್ಲೇಖವಾಗಿದೆ. ಈ ಊರಿನ ಹೆಸರನ್ನು ದಾಖಲಿಸುವಾಗ ಕೆಲವೊಮ್ಮೆ ಗೊಬ್ಬೂರು ಎಂದೂ, ಕೆಲವೊಮ್ಮೆ ಗಬ್ಬೂರು ಎಂದು ದಾಖಲಿಸುವದು ವಾಡಿಕೆಯಾಗಿದೆ.

ಗಬ್ಬೂರು ಸಾಂಸ್ಕೃತಿಕವಾಗಿ ಸಮೃದ್ಧಿಯಾಗಿರುವಂತಹದ್ದು. 'ಕರ್ನಾಟಕದ ಸಾಂಸ್ಕೃತಿಕ ಖಜಾನೆಯನ್ನು ಬಚ್ಚಿಟ್ಟುಕೊಂಡಿರುವ ಊರುಗಳಲ್ಲೊಂದು. ಕಲೆ ಧರ್ಮದ ಬೀಡಾಗಿರುವ ಇತಿಹಾಸ ಪ್ರಸಿದ್ಧ ಸ್ಥಳ. ಪ್ರಾಚೀನ ಅಯ್ಯನವಾಡಿ ಮುನ್ನೂರರ ವಿಭಾಗದ ಪ್ರಮುಖ ಅಗ್ರಹಾರವಾದ ಇದು ಶ್ರೀಮಂತ–ಬಡವ ಎಂಬ ಭೇದ ಭಾವವಿಲ್ಲದೆ ಎಲ್ಲರನ್ನು ಕೈಬೀಸಿ ಕರೆಯುತ್ತಿದೆ'[1]. ಇಲ್ಲಿ ಶರಣರು, ಅನುಭಾವಿಗಳು, ಜನಪದ ಕವಿಗಳು, ಕಲಾವಿದರು ಜೀವಿಸಿದ ಸಮೃದ್ಧ ನೆಲವಿದು. ಇದೊಂದೇ ಊರಿನಲ್ಲಿ ಹದಿಮೂರು ಶಾಸನಗಳು ದೊರಕಿವೆ. ಏಳು ಅಂಕಿ ಇಲ್ಲಿ ಶುಭದ ಸಂಕೇತವಾಗಿರಬೇಕು. ಅದಕ್ಕಾಗಿ ಏಳು ಬಾವಿಗಳಿವೆ. ಈ ಹೆಸರಿನಲ್ಲಿ 'ಏಳುಬಾವೆಪ್ಪ' ಎನ್ನುವ ಹೆಸರಿನ ವ್ಯಕ್ತಿಗಳಿದ್ದಾರೆ.

ಹನ್ನೆರಡನೆಯ ಶತಮಾನ ಸಾಮಾಜಿಕ ಕ್ರಾಂತಿಯ ಬೀಜವನ್ನು ಬಿತ್ತಿದ ಕಾಲ. ಬಸವಣ್ಣನಿಂದ ಹಿಡಿದು ಮಾದಾರ ಚೆನ್ನಯ್ಯನವರೆಗೆ ಎಲ್ಲರನ್ನು ಒಂದೇ ಸ್ಥಳದಲ್ಲಿ ಒಗ್ಗೂಡಿಸಿದ ಸಂದರ್ಭವಿದು. ಈ ಕಾಲದಲ್ಲಿ ಮೇಲು ವರ್ಗದವರಿಂದ ಹಿಡಿದು ಕೆಳ ವರ್ಗದವರೆಗೆ ಎಲ್ಲ ಕಸುಬುದಾರರೂ ಕ್ರಾಂತಿಯ ಭಾಗವಾಗಿದ್ದರು. ಕಾರಣವೇನೆಂದರೆ ಶತಶತಮಾನಗಳಿಂದ ದಮನಕ್ಕೆ, ತಾರತಮ್ಯಕ್ಕೆ ಒಳಗಾಗಿದ್ದ ಸಮುದಾಯಗಳಿಗೆ ಬಿಡುಗಡೆ ಬೇಕಾಗಿತ್ತು. ಅಂತಹ ಸಂದರ್ಭವನ್ನು ರೂಪಿಸಿದ್ದು ಶರಣ ಚಳುವಳಿ. ಈ ಚಳುವಳಿ ಬಹುದೊಡ್ಡ ವೈಚಾರಿಕ ಕ್ರಾಂತಿಯನ್ನು ಹುಟ್ಟು ಹಾಕಿತು. ಸಮಾಜದಲ್ಲಿ ಬೇರು ಬಿಟ್ಟಿದ್ದ ಅನ್ಯಾಯ, ಅಧರ್ಮ, ಅಮಾನವೀಯ ಮೌಲ್ಯಗಳನ್ನು ಖಂಡಿಸುತ್ತ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಕೆಲಸವನ್ನು ಶರಣ ಚಳುವಳಿ ರೂಪಿಸಿತು.

ಈ ಚಳುವಳಿಯು ನಾಡಿನ ಬೇರೆ ಬೇರೆ ಮೂಲೆಗಳಿಂದ ಅನೇಕರನ್ನು ಕಲ್ಯಾಣವೆಂಬ ಕರ್ಮ ಭೂಮಿಯ ಕಡೆ ಸೆಳೆಯಲು ಕಾರಣವಾಯಿತು. ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ, ಮಾದಾರ ಚೆನ್ನಯ್ಯ ಮುಂತಾದವರು ಕಲ್ಯಾಣದೆಡೆಗೆ ಆಗಮಿಸಿದರು. ಅನುಭವ ಮಂಟಪದಲ್ಲಿ ಸೇರಿದ ಎಲ್ಲ ಶರಣರು ತಮ್ಮ ತಮ್ಮ ವಿಚಾರಗಳನ್ನು ತರ್ಕಕ್ಕೆ ಹಾಕಿ ಅದನ್ನು ಸರಿಯಾದ ರೂಪಕ್ಕೆ ಹದಗೊಳಿಸಿ ಸಿದ್ಧಪಡಿಸುತ್ತಿದ್ದರು. ಇಂತಹ ಶರಣರ ಬಳಗದಲ್ಲಿದ್ದವರೇ ಗಬ್ಬೂರಿನ ಬಿಬ್ಬಿ ಬಾಚರಸ. ಈತನನ್ನು ಚೆನ್ನಬಸವಣ್ಣ, ಸಿದ್ಧರಾಮ (ಬಾಚರಸ), ಸಕಳೇಶ ಮಾದರಸ, ಮಡಿವಾಳ ಮಾಚಿದೇವ, ಗಣದಾಸಿ ವೀರಣ್ಣ, ಸತ್ಯಕ್ಕನಂತಹವರು ತಮ್ಮ ವಚನದಲ್ಲಿ ನೆನೆಯುವದನ್ನು ಗಮನಿಸಿದರೆ ಬಿಬ್ಬಿಬಾಚರಸನು ಇವರ ಸಮಕಾಲೀನನೆಂದು ತಿಳಿಯಬಹುದು. ಮೇಲಾಗಿ ಈ ಶರಣರೆಲ್ಲರೂ 'ಇವರನ್ನು ಸ್ಮರಿಸುವದರಿಂದ ಇವರಿಗೆ ಸಮಕಾಲೀನರಾಗಿ, ಹಿರಿಯ ವಯಸ್ಸಿನವರಾಗಿ ಬಾಚಯ್ಯನವರು ಇದ್ದಿರಬೇಕೆನಿಸುತ್ತದೆ. ವಯೋಮಾನದಲ್ಲಿ ಬಹುಶಃ ಹಿರಿಯನೆಂದೇ ಸಕಲೇಶ ಮಾದರಸನು ಗುರುತಿಸಲ್ಪಡುತ್ತಾನೆ. ಈತನು ಬಿಬ್ಬಿಬಾಚಯ್ಯನವರನ್ನು ಕೊಂಡಾಡುವುದು ನೋಡಿದರೆ ಬಾಚಯ್ಯನವರ ಪ್ರಸಾದ ಮಹಾತ್ಮೆ ಮಾದರಸನವರೆಗೆ ತಲುಪಿ ನುಡಿಗೊಳ್ಳಬೇಕಾದರೆ ನಡುವೆ ಕೆಲವರ್ಷಗಳೇ ಉರುಳಿರಬೇಕೆನಿಸುತ್ತದೆ. ಈ ವಚನದಲ್ಲಿ ಸಿರಿಯಾಳನ ನಂತರದಲ್ಲಿ ಬಿಬ್ಬಿಬಾಚಯ್ಯನವರ ಮಹಾತ್ಮೆಯ ಬಣ್ಣನೆ ಬರುತ್ತಿದ್ದು, ಆನಂತರದಲ್ಲಿ ಸಿದ್ಧರಾಮ, ಅಲ್ಲಮಪ್ರಭುಗಳ ಮಹಾತ್ಮೆ ಬರುವುದರಿಂದ ಈ ಕ್ರಮವನ್ನು ಕಾಲಾನುಕ್ರಮವಾಗಿ ಲಕ್ಷಿಸಿದರೆ ಬಿಬ್ಬಿಬಾಚಯ್ಯನವರು ವಯಸ್ಸಿನಲ್ಲಿ ಬಸವಣ್ಣ, ಚೆನ್ನಬಸವಣ್ಣನವರಿಗೂ ಹಿರಿಯರಾಗಿದ್ದು ಸಕಳೇಶ ಮಾದರಸ ಮತ್ತು ಸಿದ್ಧರಾಮರ ಸಮ ವಯಸ್ಕರೆಂದು ಗ್ರಹಿಸಬಹುದು'[2]. ಹೀಗಾಗಿ ಬಿಬ್ಬಿ ಬಾಚರಸನು ಹನ್ನೆರಡನೆಯ ಶತಮಾನದಲ್ಲಿ ಬಾಳಿದ್ದನೆಂದು ದೃಢಪಡಿಸಿಕೊಳ್ಳಬಹುದು.